ಅಧಿಕಾರಿ: ಯಾರು ನೀನು ಏತಕ್ಕೆ ಬಂದಿದ್ದೀಯಾ?

ಗುಂಡ: ರಕ್ತದಾನ ಮಾಡಲು ಬಂದಿದ್ದೇನೆ.

ಅಧಿಕಾರಿ: ನಿನ್ನನ್ನು ನೋಡಿದರೆ ಈಗಲೋ ಆಗಲೋ ಸಾಯುವ ಹಾಗಿದ್ದೀಯಾ. ಇನ್ನು ರಕ್ತವನ್ನು ಎಲ್ಲಿ ದಾನ ಮಾಡುತ್ತೀಯಾ?

ಗುಂಡ: ಹೊರಗಡೆ ಬಕೀಟನಲ್ಲಿದೆ ನೋಡಿ.

***

ಹುಡುಗಿ: ನನ್ನ ಮೊಬೈಲ್ ಯಾವಾಗಲೂ ನನ್ನ ಅಮ್ಮನ ಹತ್ತಿರವೇ ಇರುತ್ತದೆ.

ಹುಡುಗ: ಮತ್ತೆ ನನ್ನ ಕಾಲ್ ಬಂದಾಗ ಅವರು ರಿಸೀವ್ ಮಾಡಿದರೆ ಗತಿಯೇನು?

ಹುಡುಗಿ: ಹೆದರಬೇಡ. ನಾನು ನಿನ್ನ ನಂಬರನ್ನು 'ಬ್ಯಾಟರಿ ಲೊ' ಅಂತ ಸೇವ್ ಮಾಡಿದ್ದೇನೆ. ಅಕಸ್ಮಾತ್ ನಿನ್ನ ಕಾಲ್ ಬಂದಾಗ ಚಾರ್ಜ್‌ಗೆ ಹಾಕೂಂತ ಮೊಬೈಲನ್ನು ಅವರೇ ನನ್ನ ಕೈಗೆ ಕೊಡ್ತಾರೆ.

***

ಗುಂಡ: ತಗೋ ನಿನ್ನ ಹುಟ್ಟುಹಬ್ಬಕ್ಕೆ ಈ ಸುಂದರವಾದ ಚಿನ್ನದ ಸರ.

ಹೆಂಡತಿ: ರೀ ಸರ ತುಂಬಾ ಚೆನ್ನಾಗಿದೆ.

ಗುಂಡ: ನಾಳೆ ಇದನ್ನು ನನಗೆ ವಾಪಸ್ಸು ಕೊಟ್ಟುಬಿಡು.

ಹೆಂಡತಿ: ಅರೆ ಯಾಕೆ?

ಗುಂಡ: ಇದು ಇವತ್ತು ಒಂದು ದಿನಕ್ಕೆ ಬಾಡಿಗೆಗೆ ತಂದದ್ದು.

***



ಗಣೇಶ್

ಗುಂಡ: ನಿನ್ನೆ ನಾನು ನನ್ನ ಹೆಂಡತಿಯ ಮುಂದೆ ಮೀಸೆ ತಿರುವಿ ತೋರಿಸಿದೆ ಗೊತ್ತಾ?

ಗೆಳೆಯ: ಅರೆ ಹೌದಾ? ಆಮೇಲೇನಾಯಿತು?

ಗುಂಡ: ಆಗೋದೇನು?ಅವಳು ನನ್ನ ಕೈಲಿ ದೋಸೆ ಹಿಟ್ಟು ತಿರುವಿಸಿದಳು.

ರಾಯರು: ನಿಮ್ಮ ಮಗ ಪೊಲೀಸ್ ಆಗಬೇಕೋ ಇಲ್ಲಾ ಕಳ್ಳ ಆಗಬೇಕೋ?

ಗುಂಡ: ಪೊಲೀಸ್ ಆದರೆ ಸಾಕು ಅಲ್ಲವೇ?

***

ಗುಂಡ: ನನ್ನ ಮೊಬೈಲ್‌ಗೆ ಒಳ್ಳೊಳ್ಳೆಯ ಹಾಡುಗಳನ್ನು ಹಾಕಿಕೊಡಿ.

ಅಂಗಡಿಯವನು: ನಿಮ್ಮಲ್ಲಿ ಮೆಮೊರಿ ಕಾರ್ಡ್ ಇದೆಯಾ?

ಗುಂಡ: ಇಲ್ಲ. ರೇಶನ್ ಕಾರ್ಡ್ ಇದೆ ಆಗುತ್ತಾ?

***

ಹೆಡ್ಮಾಸ್ಟರ್: ಏನಯ್ಯಾ ಕ್ಲಾಸಿಗೆ ಮೂವತ್ತು ನಿಮಿಷ ಲೇಟಾಗಿ ಬಂದಿದ್ದೀಯಾ?

ಗುಂಡ: ಇಲ್ಲಾ ಸಾರ್. ನಾನು ಮುಂದಿನ ಕ್ಲಾಸಿಗೆ ಬೇಗ ಬಂದಿದ್ದೇನೆ.

***

ರಂಗಮ್ಮ: ರೀ ಕಮಲಮ್ಮ ಬೆಳಿಗ್ಗೆಯಿಂದ ನಮ್ಮ ಮನೆ ಕೆಲಸದವಳು ಕಾಣುತ್ತಿಲ್ಲ.

ಕಮಲಮ್ಮ: ಅಯ್ಯೋ ಅದಕ್ಯಾಕೆ ಅಷ್ಟೊಂದು ಗಾಭರಿಯಾಗುತ್ತೀರಿ? ಕೆಲಸಕ್ಕೆ ಬೇರೆ ಯಾರನ್ನಾದರೂ ಹುಡುಕಿದರೆ ಆಯಿತು.

ರಂಗಮ್ಮ: ಅಯ್ಯೋ ವಿಷಯ ಅದಲ್ಲಾರೀ! ಜೊತೆಗೆ ನಮ್ಮ ಯಜಮಾನರೂ ಕಾಣ್ತಾ ಇಲ್ಲ.

***

ಗುಂಡ: ಲೋ ಗಣೇಶ ಹಣ ಉಳಿತಾಯ ಮಾಡೋದು ಹೇಗೆ ಅಂತ ನಿನಗೆ ಗೊತ್ತಾ?

ಗಣೇಶ: ಇಲ್ಲ ಗೊತ್ತಿಲ್ಲ. ನಿನಗೆ ಗೊತ್ತಾ?

ಗುಂಡ: ಓ ಗೊತ್ತು.

ಗಣೇಶ: ಹೇಗೆ?

ಗುಂಡ: ಖರ್ಚು ಮಾಡದಿದ್ದರಾಯಿತು ಅಷ್ಟೇ.

ಸಂಗ್ರಹ: ಎಂ.ಕೆ. ಮಂಜುನಾಥ್

ಗುಂಡ: ಡಾಕ್ಟರೆ, ಟೆಸ್ಟ್ ಮಾಡಿದ ಮೇಲೆ, ಯಾವುದಾದರೂ ಕಾಯಿಲೆ ಇದ್ದರೆ ನನಗೆ ಅರ್ಥ ಆಗೋ ಹಾಗೆ ಸಿಂಪಲ್ ಆಗಿ ಹೇಳಿ.

ಡಾಕ್ಟರ್: ನೀವು ಮಿತಿ ಮೀರಿ ತಿಂತಾ ಇದ್ದೀರಿ. ಸಿಕ್ಕಾಪಟ್ಟೆ ಗುಂಡು ಹಾಕ್ತಾ ಇದ್ದೀರಿ.

ಗುಂಡ: ಹೌದು ಸಾರ್. ಈಗ ಅದನ್ನೇ ನಿಮ್ಮ ಭಾಷೆಯಲ್ಲಿ ಬರ್ಕೊಡಿ. ನನ್ನ ಹೆಂಡತಿ ಗೆ ತೋರಿಸೋಕೆ.

***

ಟೀಚರ್: ಬದುಕಿನಲ್ಲಿ ನಾವೆಲ್ಲಾ ಆಗಾಗ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಒಂದು ಉದಾಹರಣೆ ಕೊಡಯ್ಯ ಗುಂಡ.

ಗುಂಡ: ನಾನು ಮತ್ತು ನೀವು ಸಾರ್.

ಟೀಚರ್: ಬಿಡಿಸಿ ಹೇಳು.

ಗುಂಡ: ನಾನು ನನ್ನ ತಲೆ ಕೂದಲನ್ನು ಈಗಿನ ಲೇಟೆಸ್ಟ್ ಸ್ಟೈಲ್‌ಗೆ ಹೊಂದಿಸುತ್ತೇನೆ. ಆದರೆ ನೀವು ಹೇರ್ ಸ್ಟೈಲನ್ನೇ ಈಗಿರುವ ಕೂದಲಿಗೆ ಹೊಂದಿಸುತ್ತೀರಿ.

***

ಪೊಲೀಸ್ ಕಮಿಷನರ್ ಹತ್ತಿರದ ಸಂಬಂಧಿ ಗುಂಡ ಪೊಲೀಸ್ ಇಲಾಖೆ ನಡೆಸಿದ ಟೆಸ್ಟ್‌ನಲ್ಲಿ ಫೇಲಾಗಿದ್ದ. ಅವನು ಆಯ್ಕೆ ಯಾಗುವಂತೆ ಮಾಡಲು ಇಲಾಖೆಯ ಅಧಿಕಾರಿಗಳು ಹರಸಾಹಸ ಪಡುತ್ತಿದ್ದರು.

ಸಂದರ್ಶನದಲ್ಲಿ ಪೊಲೀಸ್ ಹಿರಿಯ ಅಧಿಕಾರಿ: ಅಮೆರಿಕ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಅವರಿಗೆ ಗುಂಡು ಹೊಡೆದರಲ್ಲ, ಯಾರು ?

ಗುಂಡ: (ಸ್ವಲ್ಪ ಯೋಚಿಸಿ) ನನಗೆ ಸ್ವಲ್ಪ ಸಮಯ ಕೊಡಕ್ಕಾಗುತ್ತ ಸಾರ್?

ಪೊಲೀಸ್‌ಅಧಿಕಾರಿ: ಆಗಲಿ, ನಾಳೆ ಬೆಳಿಗ್ಗೆ ಬನ್ನಿ.

ಗುಂಡನ ಪತ್ನಿ: (ಮನೆಯಲ್ಲಿ) ಇಂಟರ್‌ವ್ಯೂಗೆ ಹೋಗಿದ್ದೀರಲ್ಲ, ಚೆನ್ನಾಗಿ ಆಯ್ತಾ? ಕೆಲಸ ಸಿಗಬಹುದಾ?

ಗುಂಡ: ಸಿಕ್ಕಿದೆ ಅನ್ನಿಸುತ್ತಿದೆ. ದೊಡ್ಡವರೊಬ್ಬರ ಕೊಲೆ ಕೇಸನ್ನು ನನಗೆ ವಹಿಸಿದ್ದಾರೆ.

ಸಂಗ್ರಹ: ಹಾಸ್ಯ ಬ. ಜಯಾನಂದ ಮೈಸೂರು

ರಂಗ: ಎಷ್ಟು ದುಡ್ಡು ಇದ್ದರೂ ರೈಲು, ಬಸ್ಸಿನಲ್ಲಿ ಮಾತ್ರ ಓಡಾಡುತ್ತೀಯ ವಿಮಾನದಲ್ಲಿ ಓಡಾಡಲ್ಲ ಯಾಕೋ

ಗುಂಡ: ನನಗೆ ಪ್ರಯಾಣ ಮಾಡುವಾಗ ವಾಂತಿ ಬರತ್ತೆ ವಿಮಾನದಲ್ಲಿ ಕಿಟಕಿ ತೆಗೆಯಕ್ಕೆ ಆಗಲ್ಲ ಅದಕ್ಕೆ ಕಣೋ.

***

ರಂಗ: ಇಷ್ಟು ದೊಡ್ಡ ಬಸ್ಸು ಲೀಲಾಜಾಲವಾಗಿ ಓಡಿಸುತ್ತೀಯ ಸೈಕಲ್ ಓಡಿಸಕ್ಕೆ ಭಯ ಪಡುತ್ತೀಯ ಯಾಕೋ

ಗುಂಡ: ಬಸ್ಸು ಓಡಿಸುವಾಗ ಏನಾದರೂ ತೊಂದ್ರೆ ಆದ್ರೆ ಸಹಾಯ ಮಾಡಕ್ಕೆ ತುಂಬಾ ಜನ ಇರುತ್ತಾರೆ ಸೈಕಲ್ ನಲ್ಲಿ ಒಬ್ಬನೇ ಇರ್ತೀನಲ್ಲ ಭಯ

***

ರಂಗ: ಎತ್ತರದ ಕಟ್ಟಡ, ಬೆಟ್ಟ, ಪರ್ವತದ ಮೇಲಿನಿಂದ ಧೈರ್ಯವಾಗಿ ಜಂಪ್ ಮಾಡುತ್ತೀಯ ಆದರೆ 4 ಅಥವಾ10 ಮೆಟ್ಟಿಲುಗಳಿಂದ ಜಂಪ್ ಮಾಡಲ್ಲ ಯಾಕೆ?

ಗುಂಡ: ಮೇಲಿನಿಂದ ಬಿದ್ದರೆ ಅಬ್ಬಬ್ಬಾ ಅಂದರೆ 5 ನಿಮಿಷದಲ್ಲಿ ಪ್ರಾಣ ಹೋಗತ್ತೆ, ಖರ್ಚು, ನೋವು ಇಲ್ಲ. ಅದೇ ಹತ್ತಿರದಿಂದ ಜಂಪ್ ಮಾಡಿ ಬಿದ್ರೆ ಕೈ ಕಾಲು ಮುರಿದುಕೊಂಡು 3 ತಿಂಗಳು ಆಸ್ಪತ್ರೆ ಸೇರಿ ಖರ್ಚು ಮಾಡಬೇಕು. ಈ risk ಬೇಡಪ್ಪ.

***

ಗಂಡ: ಇನ್ನು ಮೇಲೆ ಮನೇಲಿ ಎಣ್ಣೆಯಲ್ಲಿ ಕರಿದ ತಿಂಡಿಗಳು ಸಿಹಿ ತಿಂಡಿಗಳನ್ನು ಮಾಡಲೇ ಬಾರದು ಖರ್ಚು ಜಾಸ್ತಿ

ಹೆಂಡ್ತಿ: ಆಯ್ತು ರೀ ನೀವು ಹೇಳಿದಂಗೆ ಕೇಳ್ತೀನಿ

ಗಂಡ: ಏನೇ ಮತ್ತೆ ಬೊಂಡ, ಬರ್ಫಿ ಮಾಡಿದ್ದೀಯ

ಹೆಂಡ್ತಿ: ದೇವರಾಣೆ ಮನೇಲಿ ಮಾಡಿದ್ದಲ್ಲ ರೀ... ತಂದಿದ್ದು

ಸಂಗ್ರಹ: ಬಿ.ಆರ್. ಉಷಾ ಬೆಂಗಳೂರು